13.10-2008
PRAJAVANI

## ಗಲೀಜು...!

ಕನಕಗಿರಿಯಲ್ಲಿ ಈಚೆಗೆ ಸುರಿದ ಮಳೆಯಿಂದಾಗಿ ಸಮುದಾಯ ಆರೋಗ್ಯ ಕೇಂದ್ರದ ಮುಂದೆ ಸಂಗ್ರಹಗೊಂಡ ಗಲೀಜನ್ನು ಸ್ವಚ್ಛಗೊಳಿಸಲು ಗ್ರಾಪಂ ವಿಫಲವಾಗಿದೆ.



## ಕಿವಿ ತಪ...

ಇನ್ನರ್‌ವೀಲ್‌ಕ್ಲಬ್‌ನ ಸ್ಥಳೀಯ ಘಟಕದ ಆ...
ಭಾನುವಾರ ಕೊಪ್ಪಳದ ಡಾ.ಕೆ.ಜಿ.ಕುಲಕರ್ಣಿ ಆ...
ಹಮ್ಮಿಕೊಂಡಿದ್ದ ಶ್ರವಣ ದೋಷಗಳ ಉಚಿತ ...
ಶಿಬಿರದಲ್ಲಿ ಚೆನ್ನೈ ಮೂಲದ ಶ್ರವಣ ತಜ್ಞ ಸೀತ...
ಶಿಬಿರದಲ್ಲಿ ಪಾಲ್ಗೊಂಡವರ ಕಿವಿ ತಪಾಸಣೆ ನಡೆಸಿದರು...
ಡಾ.ರಾಧಾ ಕುಲಕರ್ಣಿ, ಹೇಮಲತಾ ನಾಯಕ್,
ಬಳ್ಳೊಳ್ಳಿ, ರತ್ನಾ ಪಾಟೀಲ, ವೈಷ್ಣವಿ ಇತರರು...

# ಸ್ವಸಹಾಯದಿಂದ ಸ್ವಾವಲಂಬನೆಯತ್ತ...

ಭೀಮಸೇನ ಚಳಗೇರಿ

ಪ್ರಜಾವಾಣಿ ವಾರ್ತೆ

## ನಗರ ಸಂಚಾರ



ಕೊಪ್ಪಳದ ಸ್ಟೇಶನ್ ರಸ್ತೆಯಲ್ಲಿರುವ ಮಳಿಗೆಯೊಂದರಲ್ಲಿ ಸ್ಟಬರ್‌ಗಳನ್ನು ತಯಾರಿಸುವಲ್ಲಿ ನಿರತರಾಗಿರುವ ಕೊಟ್ಟೂರೇಶ್ವರ ಸ್ವಸಹಾಯ ಸಂಘದ ಸದಸ್ಯರು.

**ಕೊಪ್ಪಳ:** ಓದಿದ್ದು ಕೇವಲ ಎಸ್‌ಎಸ್‌ಎಲ್‌ಸಿ. ಆರ್ಥಿಕ ಮುಗ್ಗಟ್ಟಿನಿಂದ ಇಷ್ಟರವರೆಗೆ ಓದಲು ಸಾಧ್ಯವಾಗಿದ್ದರೂ, ಸ್ವಪ್ರಯತ್ನದಿಂದ ಆರ್ಥಿಕವಾಗಿ ಸಬಲಗೊಳ್ಳಬೇಕು ಎಂದು ಕನಸು ಕಂಡು, ಆ ಕನಸನ್ನು ನನಸು ಮಾಡುವ ನಿಟ್ಟಿನಲ್ಲಿ ಈ ನಾಲ್ವರು ಮಹಿಳೆಯರು ಸ್ವಯಂ ಉದ್ಯೋಗ ಕೈಗೊಂಡಿದ್ದಾರೆ.

ಪ್ರತಿ ಮನೆಯಲ್ಲೂ ನಿತ್ಯ ಬಳಸುವ, ಪ್ಲಾಸ್ಟಿಕ್‌ನಿಂದ ವಿನ್ಯಾಸಗೊಳಿಸುವ 'ಸ್ಟಬರ್' ತಯಾರಿಸುವ ಕಾಯಕದಲ್ಲಿ ಭವಿಷ್ಯ, ತೃಪ್ತಿ ಕಾಣುತ್ತಿರುವ ಇವರು, ಇತರರಿಗೂ ಮಾದರಿಯಾಗಿದ್ದಾರೆ.

ಇಂತಹ ಕಾಯಕ ನಿರತ ಮಹಿಳೆಯರನ್ನು ನೋಡಬೇಕು ಎಂದರೆ, ನಗರದ ಸ್ಟೇಶನ್‌ಗೆ ಸಂಪರ್ಕಿಸುವ ರಸ್ತೆಯಲ್ಲಿ ಎಡಭಾಗದಲ್ಲಿರುವ ಮಳಿಗೆಗೆ ಭೇಟಿ ನೀಡಿದರೆ ಸಾಕು.

ಬರೀ, ಭೇಟಿ ನೀಡಿದರೆ ಹೇಗೆ. ಅಂಗಡಿ ಗುರುತಿಸುವುದಾದರೂ ಹೇಗೆ ಎಂಬ ಅನುಮಾನ ಸಹಜ. ಅದೂ ಸುಲಭ. ಸ್ಟೇಶನ್ ರಸ್ತೆಯುದ್ದಕ್ಕೂ ಇರುವ ಎಡಭಾಗದ ಅಂಗಡಿಗಳ ಒಂದರಲ್ಲಿ ಚಿಕ್ಕಚಿಕ್ಕ ಪ್ಲಾಸ್ಟಿಕ್ ಚೀಲದಲ್ಲಿರಿಸಿ, ತೂಗು ಹಾಕಿರುವ ವಿವಿಧ ಬಣ್ಣಗಳ ಸ್ಟಬರ್‌ಗಳು ತಕ್ಷಣ ನಿಮ್ಮ ಗಮನ ಸೆಳೆಯುತ್ತವೆ.

ಈ ಚಿಕ್ಕ ಉದ್ಯಮವನ್ನು ನಡೆಸಿಕೊಂಡು ಹೋಗುತ್ತಿರುವ ರೇಖಾ ಸಿಂದೋಗಿ ಸಮೀಪದ ಹಲಗೇರಿ ಗ್ರಾಮದವರು. ತಾಲ್ಲೂಕಿನವರೇ ಆದ ಗಾಯತ್ರಿ, ರೇಣುಕಾ ಹಾಗೂ ವಿಜಯಲಕ್ಷ್ಮಿ ಎಂಬುವವರು ...ವರ ಜೊತೆ ದುಡಿಯುತ್ತಾರೆ.

ಸ್ಟಬರ್‌ಗಳನ್ನೇ ತಯಾರಿಸುವ ಘಟಕ ಸ್ಥಾಪಿಸಬೇಕು ಎಂಬ ವಿಚಾರ ಹೇಗೆ ಬಂತು ಎಂಬ ಪ್ರಶ್ನೆಯೊಂದಿಗೆ ಮಾತು ಆರಂಭಿಸಿದಾಗ ರೇಖಾ ಸಿಂದೋಗಿ ವಿವರಿಸಿದ್ದು ಹೀಗೆ. ನಗರದ ಇಂದ್ರಕೀಲನಗರದಲ್ಲಿರುವ ಸಂಪರ್ಕ ಎಂಬ ಸಂಸ್ಥೆ ವಿವಿಧ ಕೌಶಲಗಳಲ್ಲಿ ತರಬೇತಿ ನೀಡುತ್ತದೆ. ಜೊತೆಗೆ ತರಬೇತಿ ನಂತರ ಅದಕ್ಕೆ ಸಂಬಂಧಪಟ್ಟ ಸ್ವಯಂ ಉದ್ಯೋಗ ಕೈಗೊಳ್ಳಲು ಮಾರ್ಗದರ್ಶನ ಮಾಡುತ್ತದೆ. ಪ್ರಾರಂಭಿಕ ಬಂಡವಾಳ ಒದಗಿಸುವ ಸಂಸ್ಥೆಗೆ, ಕೆಲ ತಿಂಗಳ ನಂತರ ಪಡೆದ ಸಾಲವನ್ನು ಮರುಪಾವತಿ ಮಾಡುತ್ತೇವೆ ಎನ್ನುತ್ತಾರೆ ರೇಖಾ ಸಿಂದೋಗಿ.

ಪ್ರಾರಂಭಿಕ ಬಂಡವಾಳವಾಗಿ 15 ಸಾವಿರ ರೂ.ಗಳನ್ನು ತೊಡಗಿಸಿರುವ ತಾವು, ಸದ್ಯ ಈ ಚಿಕ್ಕ ಉದ್ಯಮವನ್ನು ನಡೆಸುತ್ತಿದ್ದೇವೆ ಎಂದೂ ಅವರು ಹೇಳುತ್ತಾರೆ.

2006ರಲ್ಲಿ ಪ್ರಾರಂಭಗೊಂಡ ಈ ಘಟಕವನ್ನು ಕಳೆದ ವರ್ಷ, 2007ರ ಏಪ್ರಿಲ್ ವರೆಗೆ, ಸಂಪರ್ಕ ಸಂಸ್ಥೆಯವರೇ ನಿರ್ವಹಿಸಿದರು. ಕಳೆದ ವರ್ಷದ ಏಪ್ರಿಲ್‌ನಿಂದ ನಾವು (ನಾಲ್ಕೂ ಜನ) ಸ್ವತಂತ್ರವಾಗಿ ನಿರ್ವಹಿಸುತ್ತಿದ್ದೇವೆ ಎಂದು ಅವರು ವಿವರಿಸುತ್ತಾರೆ.

ಕೊಟ್ಟೂರೇಶ್ವರ ಸ್ವಸಹಾಯ ಗುಂಪೊಂದನ್ನು ರಚಿಸಿಕೊಂಡಿದ್ದೇವೆ. ಯಾವ ಉದ್ಯಮ ಸ್ಥಾಪಿಸಬೇಕು ಎಂಬುದು ವ್ಯಕ್ತಿಗತ ವಿವೇಚನೆ ಬಿಟ್ಟಿದ್ದು ಎನ್ನುವ ಅವರು, ತಾವು ಕಲಿತ ಕೌಶಲವೇ ಈಗ ನಮ್ಮ ಕೈಹಿಡಿದಿದೆ ಎನ್ನುತ್ತಾರೆ.

**ಕಚ್ಚಾವಸ್ತು:** ಈ ಉದ್ಯಮದ ಪ್ರಮುಖ ಕಚ್ಚಾವಸ್ತು ಎಂದರೆ ತೆಳ್ಳಗಿನ ಪ್ಲಾಸ್ಟಿಕ್ ದಾರ. ಈ ದಾರವನ್ನು ಬೆಂಗಳೂರಿನಿಂದ ತರಿಸುತ್ತೇವೆ. ಈ ಸ್ಟಬರ್ ತಯಾರಿಕೆಗೆ ಅಗತ್ಯವಿರು ಎರಡು ಯಂತ್ರಗಳನ್ನೂ ಇಲ್ಲಿ ಅಳವಡಿಸಿದ್ದೇವೆ.

ಒಂದು ಯಂತ್ರದಿಂದ ನವಿರಾದ ನಿರ್ದಿಷ್ಟ ದಪ್ಪ ಹೊಂದಿರುವ ದಾರದ ಎಳೆಗಳನ್ನು ಸಿದ್ಧಪಡಿಸಿಕೊಳ್ಳುತ್ತೇವೆ. ನಂತರ ಈ ಇನ್ನೊಂದು ಯಂತ್ರದ ಸಹಾಯದಿಂದ ಈ ದಾರಗಳನ್ನು ಬಳಸಿ 'ಸಾಕ್ಸ್' ಎಂದು ಕರೆಯಲಾಗುವ, ಜಾಲರಿ ಆಕಾರದ ಮತ್ತು ಪೈಪ್‌ನ ರೀತಿಯ ವಸ್ತು ಸಿದ್ಧವಾಗುತ್ತದೆ. ಈ 'ಸಾಕ್ಸ್' ಅನ್ನು ಬೇಕಾದ ಅಳತೆಯಲ್ಲಿ ಕತ್ತರಿಸುತ್ತೇವೆ. ಚಿಕ್ಕ ಸ್ಟಬರ್ ತಯಾರಿಸಲು ಕನಿಷ್ಠ 7 ಗ್ರಾಂ, ದೊಡ್ಡ ಸ್ಟಬರ್ ತೂಕ 10 ಗ್ರಾಂ ಇರುವಂತೆ ಸಾಕ್ಸ್‌ಅನ್ನು ಕತ್ತರಿಸಲಾಗುತ್ತದೆ. ನಂತರ ಹೂವಿನ ಆಕಾರದಲ್ಲಿ 'ಸಾಕ್ಸ'ಅನ್ನು ಮಡಿಚಿ, ಹೊಲಿಯಲಾಗುತ್ತದೆ. ಇಷ್ಟು ಮಾಡಿದರೆ 'ಸ್ಟಬರ್' ತಯಾರಾಗುವ ಪ್ರಮುಖ ಹಂತ ಮುಗಿಯಿತು.

ನಂತರ, ಅವುಗಳನ್ನು ಪ್ಲಾಸ್ಟಿಕ್ ಚೀಲಗಳಲ್ಲಿ ಹಾಕಿ, ಚೀಲದ ತೆರೆದಿರುವ ಭಾಗವನ್ನು ಬಂದ್ ಮಾಡಲಾಗುತ್ತದೆ. ಈಗ ಮಾರಾಟಕ್ಕೆ ಸ್ಟಬರ್ ಸಿದ್ಧ.

ತಿಂಗಳಿಗೆ ಕನಿಷ್ಠ 500 ಡಜನ್‌ಗೂ ಅಧಿಕ ಸಂಖ್ಯೆಯ ಸ್ಟಬರ್‌ಗಳನ್ನು ತಯಾರಿಸುವ ಇವರು, ಪ್ರಮುಖವಾಗಿ ಬಳ್ಳಾರಿಗೆ ಕಳುಹಿಸುತ್ತಾರೆ. ಕೊಪ್ಪಳ ಹಾಗೂ ಹೊಸಪೇಟೆಯಲ್ಲೂ ಮಾರಾಟ ಇದೆ ಎನ್ನುವ ಈ ಮಹಿಳೆಯರು, ತಮ್ಮ ಶ್ರಮಕ್ಕೆ ತಕ್ಕ ಪ್ರತಿಫಲ ಸಿಗುತ್ತಿದೆ ಎಂದು ಹೆಮ್ಮೆಯಿಂದ ಹೇಳುತ್ತಾರೆ.

ಈ ಸ್ವಹಾಯ ಗುಂಪಿನ ಬಗೆ... ಹೆಚ್ಚಿನ ಮಾಹಿತಿಗಾಗಿ ಮೊಬೈ... ಸಂಖ್ಯೆ 98454-39... ಸಂಪರ್ಕಿಸಬಹುದು.